**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ,**

**ದೇವದುರ್ಗ.**

**ಸಿ.ಸಿ. ನಂ.498/2024**

ದೂರುದಾರರುಃ ಕರ್ನಾಟಕ ರಾಜ್ಯ,
ಗಬ್ಬೂರು ಪೋಲಿಸ್ ಠಾಣೆ.

**ವಿರುದ್ದ**

ಆರೋಪಿತರುಃ

1. ಅಯ್ಯಪ್ಪ ತಂದೆ ನಿಂಗಪ್ಪ, ವಯಸ್ಸು: 55 ವರ್ಷಗಳು,
ಉಃ ಒಕ್ಕಲುತನ, ಸಾಃ ಮಸೀದಾಪೂರ, ತಾಃ ದೇವದುರ್ಗ.

2. ಆಂಜನೇಯ್ಯ ತಂದೆ ಅಯ್ಯಪ್ಪ, ವಯಸ್ಸು: 28 ವರ್ಷಗಳು, ಉಃ ಒಕ್ಕಲುತನ, ಸಾಃ ಮಸೀದಾಪೂರ, ತಾಃ ದೇವದುರ್ಗ.

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮಗಳ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ-

ದಿನಾಂಕ 27.06.2024 ರಂದು ಮಧ್ಯಾಹ್ನ 02:00 ಗಂಟೆ ಸಮಯದಲ್ಲಿ ಗಬ್ಬೂರು ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ಮಸೀದಾಪೂರ ಗ್ರಾಮದ ಮಾರೆಮ್ಮ ಕ್ಯಾಂಪನಲ್ಲಿ ಸಾಕ್ಷಿ-1 ಮತ್ತು 4 ರವರು ಮನೆಯಲ್ಲಿದ್ದಾಗ ಆರೋಪಿತರು ಬಂದು ಸಾಕ್ಷಿ-1 ರವರಿಗೆ ಕರೆದು ನೀವು 1.5 ಲಕ್ಷ ರೂಪಾಯಿಗಳನ್ನು ಕೊಡ ಅಂತಾ ಕೇಳಿದಾಗ ಸಾಕ್ಷಿ-1 ರವರು ನನ್ನ ಬಳಿ ಹಣ ಇಲ್ಲ ಅಂದಾಗ ನಿಮ್ಮ ಭಾಗದ ಆಸ್ತಿ ಮಾರಿ ಹಣ ನೀಡಿ ಅಂತ ಹೇಳಿದಾಗ ಒಮ್ಮೆಲೆ ಸಿಟ್ಟಿಗೆ ಬಂದು 2 ನೇ ಆರೋಪಿತರಾದ ನೀವು ಎಲೆ ಸೂಳೆ ಎಂದು ಅವಾಚ್ಯವಾಗಿ ಬೈದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ.504 ಸಹ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕಪಾಳಕ್ಕೆ ಹೊಡೆದು ನೊವನ್ನುಂಟು ಮಾಡಿದ್ದು ಹಾಗೂ ಜಗಳ ಬಿಡಿಸಲು ಬಂದ ಸಾಕ್ಷಿ-4 ರವರಿಗೆ ನೀವು ಕೈಗಳಿಂದ ಹೊಡೆಬಡೆ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.323 ಸಹ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕಟ್ಟಿಗೆಯಿಂದ ಬೆನ್ನಿಗೆ ಹೊಡೆದು ಒಳಪೆಟ್ಟು ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.324 ಸಹ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿತರಾದ ನೀವು ಚಾಸಾ-1 ಸೀರೆ ಹಾಗೂ ಕುಪ್ಪಸವನ್ನು ಹಿಡಿದು ಎಳೆದಾಡಿ ಹರಿದು ಅವಮಾನ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 354 ಸಹ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಚಾಸಾ-1 ರವರಿಗೆ ಎಲೇ ಸೂಳೆ ಅಂತಾ ಅವಾಚ್ಯವಾಗಿ ಬೈದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 504 ಸಹ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿತರಾದ ನೀವು ಇವಾಗ ಉಳಿದಿರಿ ನೀವು 1.5 ಲಕ್ಷ ಸಾಲ ಕಟ್ಟದೇ ಇದ್ದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆಯನ್ನು ಹಾಕಿದ್ದು, ಭಾರತ ದಂಡ ಸಂಹಿತೆ ಕಲಂ 506 ಸಹ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 21.05.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ,**

**ದೇವದುರ್ಗ.**

**ಸಿ.ಸಿ. ನಂ.498/2024**

ದೂರುದಾರರುಃ ಕರ್ನಾಟಕ ರಾಜ್ಯ,
ಗಬ್ಬೂರು ಪೋಲಿಸ್ ಠಾಣೆ.

**ವಿರುದ್ದ**

ಆರೋಪಿತರುಃ

1. ಅಯ್ಯಪ್ಪ ತಂದೆ ನಿಂಗಪ್ಪ
2. ಆಂಜನೇಯ್ಯ ತಂದೆ ಅಯ್ಯಪ್ಪ

**:: <u>ಆಪಾದನೆ</u> ::**

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.

ಆರೋಪಿತರ ಸಹಿ